**ಕರ್ನಾಟಕ ವಿಧಾನಸಭೆ**

**ಗುರುವಾರ 17ನೇ ಜುಲೈ 2003 ರಂದು**

**ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ**

**ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಂಡಿತು**

**ಉಪಾಧ್ಯಕ್ಷರು (ಶ್ರೀ ಮನೋಹರ್ ಹೆಚ್. ತಹಸೀಲ್ದಾರ್) ರವರು**

**ಪೀಠವನ್ನು ಅಲಂಕರಿಸಿದ್ದರು**

## 1. ಅಧ್ಯಕ್ಷರ ಅಪ್ಪಣೆ ಮೇರೆಗೆ:

## ಪ್ರಶ್ನೋತ್ತರಕ್ಕೆ ಮೊದಲು ಬರಗಾಲದ ಬಗ್ಗೆ ಚರ್ಚೆ ಅನುಮತಿ ಕೋರಿಕೆ

**ಶ್ರೀ ಬಿ. ಸೋಮಶೇಖರ್** : ಮಾನ್ಯ ಉಪಾಧ್ಯಕ್ಷರೇ, ನಿನ್ನೆ ಒಪ್ಪಂದವಾದ ಪ್ರಕಾರ ಈ ದಿನ ಪ್ರಶ್ನೋತ್ತರ ವೇಳೆಯಲ್ಲಿ ಚರ್ಚೆ ಆರಂಭವಾಗಿ ಸರ್ಕಾರದಿಂದ ಉತ್ತರವನ್ನು ಪಡೆದುಕೊಂಡು ನಂತರ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳುವುದಾಗಿ ಅಧ್ಯಕ್ಷರ ಕೊಠಡಿಯಲ್ಲಿ ಎಲ್ಲಾ ಮುಖಂಡರ ಒಪ್ಪಿಗೆ ಮೇರೆಗೆ ತೀರ್ಮಾನವಾಗಿತ್ತು. ಅದೇ ರೀತಿ ಈಗ ಚರ್ಚೆ ಪ್ರಾರಂಭ ಮಾಡಿ ಸರ್ಕಾರದಿಂದ ಉತ್ತರ ಪಡೆದ ಮೇಲೆ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳಬೇಕು.

**ಶ್ರೀ ಅಪ್ಪಾಜಿ ಎಸ್. ನಾಡಗೌಡ** : ಸರ್ಕಾರದ ಉತ್ತರ ನಾಳೆ ದಿವಸ ಇಟ್ಟುಕೊಳ್ಳಲಾಗಿದೆ. ಪ್ರಶ್ನೋತ್ತರ ವೇಳೆ ಮುಗಿದು ಬಿಡಲಿ ನಂತರ ಪೂರ್ತಿ ದಿನ ಚರ್ಚೆಯಾಗಲಿ ಎಂದು ಅಧ್ಯಕ್ಷರು ಕೊನೆಗೆ ಹೇಳಿದರು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** : ಅಧ್ಯಕ್ಷರ ಜೊತೆಗೆ ಚರ್ಚೆ ಮಾಡುವಾಗ ತಾವು ಇದ್ದಿರಿ, ಎಲ್ಲಾ ಚರ್ಚೆಯಾಗಿದೆ, ಸಂಸದೀಯ ವ್ಯವಹಾರ ಸಚಿವರ ಜೊತೆಗೆ ಮಾನ್ಯ ಸಭಾಧ್ಯಕ್ಷರು ಚರ್ಚೆ ಮಾಡಿದ್ದಾರೆ, ಬರಗಾಲದ ಪರಿಸ್ಥಿತಿ ತುಂಬಾ ಗಂಭೀರವಾಗಿರುವುದರಿಂದ ಎಲ್ಲಾ ಕಡೆ ಚರ್ಚೆಯಾಗಿರುವುದರಿಂದ ಸರ್ಕಾರ ಇವತ್ತು ಉತ್ತರವನ್ನು ಕೊಡಬೇಕು. ಈಗ ನೀವು ಬರಗಾಲದ ಬಗ್ಗೆ ಚರ್ಚೆ ಆರಂಭಿಸಿದರೆ ನಮ್ಮ ಕೆಲವು ಸದಸ್ಯರುಗಳು ಮಾತನಾಡಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ ನಂತರ, ಸರ್ಕಾರ ಉತ್ತರ ಕೊಟ್ಟರೆ, ಒಳ್ಳೆಯದು.

**ಶ್ರೀ ಅಪ್ಪಾಜಿ ಎಸ್ ನಾಡಗೌಡ** : ಈಗ ಉತ್ತರ ಕೊಡುತ್ತಿಲ್ಲ ಅಂತ ತಮಗೆ ಹೇಳುತ್ತಿರುವುದು. ನಾಳೆ ಬೆಳಿಗ್ಗೆ ಉತ್ತರ ಕೊಡುವುದು.

**ಉಪಾಧ್ಯಕ್ಷರು** : ಈಗ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಬಿ. ಸೋಮಶೇಖರ್** : ಸರ್ಕಾರ ಉತ್ತರವನ್ನು ನಾಳೆ ಕೊಡಲಿ ಪರವಾಗಿಲ್ಲ.

**ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ** : ಎಲ್ಲರ ಜೊತೆಯಲ್ಲಿ ಚರ್ಚಿಸಿದಂತೆ ತಾವು ಈಗ ಬರದ ಬಗ್ಗೆ ಚರ್ಚೆ ಮಾಡಿ ಊಟದ ನಂತರ ಮಧ್ಯಾಹ್ನದ ಮೇಲೆ ಸರ್ಕಾರ ಉತ್ತರ ಕೊಡುವುದಕ್ಕೆ ಏಕೆ ಹಿಂಜರಿಯಬೇಕು? ನಾಳೇನೆ ಉತ್ತರ ಕೊಡಬೇಕು ಅಂತ ಅವರೇನು ದೇವರ ಹತ್ತಿರ ಹರಕೆ ಹೊತ್ಕೊಂಡು ಬಂದಿದ್ದಾರೆಯೇ?

**ಶ್ರೀ ಕೆ. ಗೋಪಾಲ್ ಪೂಜಾರಿ** : ಹರಕೆ ಹೊತ್ತಿರುತ್ತೇವೆ, ವ್ರತ ಮಾಡುತ್ತೇವೆ ಅನ್ನುವ ಮಾತಲ್ಲ. ಸದನದಲ್ಲಿ ಕೆಲವು ನಿಯಮದ ಪ್ರಕಾರ ಸದನ ನಡೆಯುತ್ತದೆ, ಈಗ ಪ್ರಶ್ನೋತ್ತರ ಇದೆ, ನಾಳೆ ಬೆಳಿಗ್ಗೆ ಸರ್ಕಾರ ಉತ್ತರ ಕೊಡುತ್ತದೆಂದು ಹೇಳಿದರೆ ಹರಕೆ ಹೊತ್ತಿದ್ದಾರೆ ಅಂದರೆ ಏನರ್ಥ? ಸರ್ಕಾರ ಸಮರ್ಪಕವಾಗಿ ಉತ್ತರವನ್ನು ಕೊಡಬೇಕಾಗುತ್ತದೆ. ನೀವು ಕೇಳಿದ ತಕ್ಷಣ ಉತ್ತರ ಕೊಡುವುದು, ನೀವು ಕೇಳಿದ ತಕ್ಷಣ ಬೇರೆ ಹೇಳಲಿಕ್ಕೆ ಆಗುವುದಿಲ್ಲ.

**ಶ್ರೀ ವಿ. ಕೃಷ್ಣಪ್ಪ** : ಪ್ರಶ್ನೋತ್ತರ ಆಗಲಿ. ಆಮೇಲೆ ಉತ್ತರ ಪಡೆದುಕೊಳ್ಳಬಹುದು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** : ಅಧ್ಯಕ್ಷರು ಸಂಸದೀಯ ವ್ಯವಹಾರ ಸಚಿವರ ಜೊತೆಗೆ ಮಾತನಾಡಿ ಒಪ್ಪಂದವಾಗಿದೆ, ಸರ್ಕಾರದ ಜೊತೆ ಮಾತನಾಡಿಲ್ಲ ಅಂತಲ್ಲ.

**ಉಪಾಧ್ಯಕ್ಷರು** : ಈಗ ಬರಲಿ ಮಾತನಾಡೋಣ, ಈಗ ಪ್ರಶ್ನೋತ್ತರ ಆರಂಭಿಸೋಣ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** : ರಾಜ್ಯದಲ್ಲಿ ಬರಗಾಲ ಇಷ್ಟು ಗಂಭೀರವಾಗಿದೆ ಸದನದಲ್ಲಿ ಈ ಬಗ್ಗೆ ಚರ್ಚೆಯಾಗಿದೆ, ನಾವೆಲ್ಲಾ ವಿರೋಧ ಪಕ್ಷದ ಸದಸ್ಯರು ಹಾಗೂ ಸಂಸದೀಯ ವ್ಯವಹಾರ ಸಚಿವರು ಎಲ್ಲರೂ ಸಹ ಮಧ್ಯಾಹ್ನದ ಮೇಲೆ ಇವತ್ತು ಮುಖ್ಯಮಂತ್ರಿಗಳ ಉತ್ತರವಾದ ನಂತರದಲ್ಲಿ ಅದನ್ನು ತೆಗೆದುಕೊಳ್ಳುವುದಕ್ಕೆ ಅವರು ಒಪ್ಪಿದ್ದಾರೆ. ಹಾಗಾಗಿ ಸರ್ಕಾರ ಹಾಗೂ ಸಂಸದೀಯ ವ್ಯವಹಾರ ಸಚಿವರು ಅದನ್ನು ಒಪ್ಪಿರುವ ಸಂದರ್ಭದಲ್ಲಿ ನಮಗೆ ತಾವು ಬರದ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ನೀಡಬೇಕು.

(ಗೊಂದಲ)

**ಶ್ರೀ ಕರಡಿ ಸಂಗಣ್ಣ ಅಮರಪ್ಪ** : ಮಂತ್ರಿಗಳು ಯಾರೂ ಬಂದಿಲ್ಲ, ಸರ್ಕಾರಕ್ಕೆ ಬರದ ಬಗ್ಗೆ ಎಷ್ಟು ಕಾಳಜಿ ಇದೆ ಎನ್ನುವುದು ಇದರಿಂದ ಗೊತ್ತಾಗುತ್ತದೆ.

(ಗೊಂದಲ)

**ಶ್ರೀ ಬಿ. ಸೋಮಶೇಖರ್** : ಯಾವುದೇ ವಿಷಯದ ಬಗ್ಗೆ ಚರ್ಚೆಯಾಗುವಾಗ ಸಂಬಂಧಪಟ್ಟ ಮಂತ್ರಿಗಳು ಇಲ್ಲದಿದ್ದರೆ ಹೇಗೆ?

**ಉಪಾಧ್ಯಕ್ಷರು** : ಈಗ ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ, ಇಲ್ಲದೆ ಹೋದಾಗ ಆ ಮಾತು ಬೇರೆ, ಪ್ರಶ್ನೋತ್ತರಕ್ಕೆ ಸಂಬಂಧಿಸಿದ ಮಂತ್ರಿಗಳು ಈಗ ಇದ್ದಾರೆ, ಅವರು ಈಗ ಪ್ರಾರಂಭ ಮಾಡಲಿ ಉಳಿದವರು ಬಂದೇ ಬರುತ್ತಾರೆ.

**ಶ್ರೀ ಬಿ. ಸೋಮಶೇಖರ್** : ಇವತ್ತು ಚರ್ಚೆಯಾಗಬೇಕೆಂದು ನಿನ್ನೆ ತೀರ್ಮಾನವಾಗಿತ್ತು ಅದರ ಪ್ರಕಾರ ಮಂತ್ರಿಗಳು ಬರಬೇಕಾಗಿತ್ತು, ಪ್ರತಿ ದಿನ ಅವರನ್ನು ನಾವು ಅತ್ತು ಕರೆದು ಕರೆಸಿಕೊಳ್ಳಬೇಕಾಗಿದೆ. ಪ್ರಜಾಪ್ರಭುತ್ವದ ವ್ಯವಸ್ಥೆಯೊಳಗೆ ಅವರಿಗೆ ಹೆಚ್ಚು ಜವಾಬ್ದಾರಿ ಇರಬೇಕು.

(ಗೊಂದಲ)

**ಶ್ರೀ ಬಿ. ಸೋಮಶೇಖರ್** : ಸನ್ಮಾನ್ಯ ಉಪಾಧ್ಯಕ್ಷರೇ,

**ಉಪಾಧ್ಯಕ್ಷರು** : ಸೋಮಶೇಖರ್‌ರವರೇ, ಈಗ ನಿಮ್ಮ ಪ್ರಶ್ನೆಗಳಿಗೆ ಸಂಬಂಧಪಟ್ಟಂಥ ಮಂತ್ರಿಗಳು ಇಲ್ಲಿ ಇದ್ದಾರೆ. ಈಗ ಪ್ರಶ್ನೋತ್ತರವನ್ನು ಪ್ರಾರಂಭ ಮಾಡೋಣ. ಪ್ರಶ್ನೋತ್ತರ ಈಗ ಪ್ರಾರಂಭವಾಗುತ್ತಿದೆ ಮತ್ತು ಅವರು ಬರುತ್ತಾರೆ. ಈಗ ನಾನಂತೂ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ ಏನೆಂದರೆ ಈ ವಿಧಾನಸಭೆಯಲ್ಲಿ ಏನು ನಿಗದಿ ಮಾಡಿರುವಂತಹ ಸಚಿವರುಗಳ

ಪಟ್ಟಿ ಮಾಡಿದ್ದಾರೆ ಆ ಪಟ್ಟಿಯಲ್ಲಿ ಇರುವಂತಹ ಸಚಿವರುಗಳು ಖಾಯಂ ಆಗಿ ಇಲ್ಲಿರುವುದಕ್ಕೆ ನಾನು ಈ ಸಂದರ್ಭದಲ್ಲಿ ಅವರಿಗೆ ಸೂಚನೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಜೊತೆಗೆ ಅಧಿಕಾರಿಗಳೂ ಕೂಡ ಸಂಬಂಧಪಟ್ಟವರು ಯಾರೇ ಇರಲಿ ಅವರು ಇಲ್ಲಿ ಕಡ್ಡಾಯವಾಗಿ ಇರಬೇಕು ಎನ್ನುವಂಥಾದ್ದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

**ಶ್ರೀ ಬಿ. ಸೋಮಶೇಖರ್** : ತಾವು ಮೊದಲಿನಿಂದಲೂ ನಿರ್ದೇಶನ ಕೊಡುತ್ತಿದ್ದೀರಿ. ತಮ್ಮ ಬಗ್ಗೆ ನಮಗೇನೂ ಅನುಮಾನ ಇಲ್ಲ. ತಾವು ಈ ಪೀಠದಲ್ಲಿ ಕುಳಿತುಕೊಂಡು ಪ್ರತಿಸಾರಿ ಸರ್ಕಾರದ ಅಧಿಕಾರಿಗಳಿಗೆ ಮತ್ತು ಮಂತ್ರಿಗಳಿಗೆ ಹೇಳುತ್ತಲೇ ಇದ್ದೀರಿ. ಆದರೆ ಯಾರೂ ಪಾಲನೆ ಮಾಡುತ್ತಿಲ್ಲವಲ್ಲಾ? ಅದೇ ಇಲ್ಲಿ ಬಂದಿರತಕ್ಕಂಥಾದ್ದು ತಮ್ಮ ಮಾತಿಗೂ ಬೆಲೆ ಇಲ್ಲ, ತಮ್ಮ ನಿರ್ದೇಶನಕ್ಕೂ ಬೆಲೆ ಇಲ್ಲ. ಪ್ರತಿಸಲ ತಾವು ಛೀಮಾರಿ ಹಾಕುತ್ತಲೇ ಇದ್ದೀರಿ. ಅಷ್ಟು ದಪ್ಪ ಚರ್ಮ ಇವರದ್ದು....

**ಶ್ರೀ ಆರ್.ವಿ. ದೇಶಪಾಂಡೆ** : ಮಾನ್ಯ ಉಪಾಧ್ಯಕ್ಷರೇ.....

**ಶ್ರೀ ಎಸ್.ಎಸ್. ಪಾಟೀಲ್** : ನಿನ್ನೆಯೇ ನಿರ್ಣಯ ಆಗಿದೆ. ತಾವು ದಯವಿಟ್ಟು ಸರ್ಕಾರದ ರಕ್ಷಣೆಗೆ ಹೋಗಬೇಡಿ.

**ಶ್ರೀ ಆರ್.ವಿ. ದೇಶಪಾಂಡೆ** : ಸೋಮಶೇಖರ್‌ರವರೇ, ಪಾಟೀಲರೇ ತಾವೆಲ್ಲಾ ಮಂತ್ರಿಗಳಾಗಿ ಇದ್ದವರು.....

ಗೊಂದಲ

**ಶ್ರೀ ಆರ್.ವಿ. ದೇಶಪಾಂಡೆ** : ಆಜೆಂಡಾ ಏನಿದೆ ಅದರ ಪ್ರಕಾರ ನಾವು ಹೋಗಬೇಕಾಗುತ್ತದೆ. ಮಂತ್ರಿಗಳು ರಿಪ್ಲೈ ಮಾಡಬೇಕಾದರೆ ಅವರು ಅಜೆಂಡಾದಲ್ಲಿ ಇರುವ ಪ್ರಕಾರ ಬರುತ್ತಾರೆ. ಇಲ್ಲಿ ಮೇಲ್ಮನೆ ಮತ್ತು ಈ ಮನೆ ಇದೆ. ಒಂದು ವೇಳೆ ಇಲ್ಲಿ ಬರಗಾಲದ ಬಗ್ಗೆ ನಡೆದ ಚರ್ಚೆಗೆ ಉತ್ತರ ಕೊಡಬೇಕಾದರೆ ಪ್ರಶ್ನೋತ್ತರ ಮುಗಿದ ಮೇಲೆ ಮಾಡಬೇಕಾಗುತ್ತದೆ.

**ಶ್ರೀ ಬಿ. ಸೋಮಶೇಖರ್** : ಮಾನ್ಯ ಉಪಾಧ್ಯಕ್ಷರೇ, ನಮ್ಮ ಮಾನ್ಯ ದೇಶಪಾಂಡೆಯವರಿಗೆ ನಿನ್ನೆ ಸಾಯಂಕಾಲ ಏನು ತೀರ್ಮಾನವಾಯಿತೆಂಬುದು ಗೊತ್ತಿಲ್ಲವೆಂದು ಕಾಣುತ್ತದೆ. ಬಹುಶಃ ಏನಾದರೂ ಬದಲಾವಣೆ ಮಾಡಿದ್ದರೆ..... Ultimately, only yesterday, the Speaker decided that the discussion should take place in the beginning itself. If there is any change, that should be announced here. The Ministers should have come earlier thinking that the discussion will take place. ನಾನು ಹೇಳತಕ್ಕಂಥಾದ್ದು ಏನೆಂದರೆ ನಿನ್ನೆ ಮಾನ್ಯ ಸ್ಪೀಕರ್ ಅವರ ಚೇಂಬರ್‌ನಲ್ಲಿ ತೀರ್ಮಾನ ಆಗಿದ್ದುದು ದೇಶಪಾಂಡೆಯವರಿಗೆ ಗೊತ್ತು ಮೊದಲು ಚರ್ಚೆ ಪ್ರಾರಂಭವಾಗಿ ನಂತರ ಸರ್ಕಾರದಿಂದ ಉತ್ತರ ಕೊಡಬೇಕು ಮತ್ತು ಮಧ್ಯಾಹ್ನದ ನಂತರ ಪ್ರಶ್ನೋತ್ತರವನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನ ಆಗಿತ್ತು ಏನಾದರೂ ಮಧ್ಯೆ ಬೇರೆ ತೀರ್ಮಾನ ಆಗಬೇಕಾಗಿದ್ದರೆ ಅದು ಇಲ್ಲೇ ಆಗಬೇಕಾಗಿತ್ತು. ಆದರೆ ನಿನ್ನೆ ದಿವಸ ತೀರ್ಮಾನವಾದ ಪ್ರಕಾರ ಮಂತ್ರಿಗಳು ಇವತ್ತು ಇಲ್ಲಿ ಇರಬೇಕಾಗಿತ್ತು. ಆದರೆ ಇಲ್ಲಿ ಮಂತ್ರಿಗಳೂ ಇಲ್ಲ ಮತ್ತು ಅಧಿಕಾರಿಗಳೂ ಕೂಡ ಇಲ್ಲ.

**Sri R.V. Deshpande :** Sir, we are quided by the agenda. ಸ್ಪೀಕರ್ ಅವರ ಕಚೇರಿಯಿಂದ ಏನು ಅಜೆಂಡಾ ಇಶ್ಯು ಆಗುತ್ತದೆ we are guided by that. ಇಲ್ಲಿ

ತೀರ್ಮಾನ ಆಗಿದ್ದರೆ ಅದಕ್ಕೆ ಮನ್ನಣೆ ಕೊಡಬೇಕು, ಕೊಡಬಾರದು ಎಂದು ನಾನು ಹೇಳುವುದಿಲ್ಲ. ಆದರೆ ಇಲ್ಲಿ ತೀಮಾನವಾಗಿದ್ದುದು ಪುನಃ ಬದಲಾವಣೆಯಾಗಿದೆ. ಅದು ಬದಲಾವಣೆಯಾಗಿದ್ದರೆ ಏನು ಮಾಡಬೇಕು? ಸ್ಪೀಕರ್ ಅವರ ತೀರ್ಮಾನವನ್ನು ನಾವು ಪ್ರಶ್ನೆ ಮಾಡುವ ಹಾಗಿಲ್ಲ.

**ಉಪಾಧ್ಯಕ್ಷರು** : ಈಗ ಮಾನ್ಯ ಅಧ್ಯಕ್ಷರ ಜೊತೆಯಲ್ಲಿ ಚರ್ಚೆಮಾಡಿ ಬಹಳಷ್ಟು ಜನ ಪ್ರಶ್ನೋತ್ತರಕ್ಕೆ ಮೊದಲು ಅವಕಾಶ ಕೊಡಿ ಎಂದು ಕೇಳಿದ ವಿಚಾರ ಬಂದಿದ್ದರಿಂದ ಈ ಬದಲಾವಣೆಯಾಗಿದ್ದು ಈಗ ನಾವು ಪ್ರಶ್ನೋತ್ತರವನ್ನು ಪ್ರಾರಂಭ ಮಾಡೋಣ.

**ಶ್ರೀ ಆರ್.ವಿ. ದೇಶಪಾಂಡೆ** : ಸ್ಪೀಕರ್ ಅವರ ಕಚೇರಿಯಿಂದ ಏನು ಅಜೆಂಡಾ ಬರುತ್ತದೆ ಅದನ್ನು ನಾನು ಪಾಲನೆ ಮಾಡಬೇಕಾಗುತ್ತದೆ. ಅವರ ಕಚೇರಿಯಿಂದ ಏನು ಅಜೆಂಡಾ ಬರುತ್ತದೆ ಅದನ್ನು ನಾವು ಗೌರವಿಸಬೇಕಾಗುತ್ತದೆ. ಪ್ರಶ್ನೋತ್ತರ ಆದಮೇಲೆ ಸರ್ಕಾರ ಉತ್ತರ ಕೊಡುತ್ತದೆ.

**ಉಪಾಧ್ಯಕ್ಷರು** : ಆಯಿತು, ಈಗ ನಾವು ಪ್ರಶ್ನೋತ್ತರವನ್ನು ಪ್ರಾರಂಭ ಮಾಡುತ್ತಿದ್ದೇವೆ.

**ಶ್ರೀ ಎಸ್.ಎಸ್. ಪಾಟೀಲ್** : ಮಾನ್ಯ ಉಪಾಧ್ಯಕ್ಷರೇ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದೆ. ಈ ದಿವಸ ಯಾವ್ಯಾವ ಮಂತ್ರಿಗಳನ್ನು ಇಲ್ಲಿ ಅಲಾಟ್ ಮಾಡಿದ್ದಾರೆ ಆ ಪಟ್ಟಿಯನ್ನು ತಾವು ತರಿಸಿ ಓದಿ. ಅವರು ತಮ್ಮ ಪರವಾನಗಿಯನ್ನು ತೆಗೆದುಕೊಂಡು ಹೋಗಿದ್ದಾರೆಯೇ ಎಂಬುದನ್ನು ತಾವು ನಮಗೆ ಹೇಳಬೇಕು. ತಮ್ಮ ಪರವಾನಗಿಯನ್ನು ತೆಗೆದುಕೊಂಡು ಅವರು ಹೋಗಿದ್ದರೆ ಅಡ್ಡಿಯಿಲ್ಲ. ಇದರ ಬಗ್ಗೆ ದಯವಿಟ್ಟು ತಾವು ಹೇಳಬೇಕು.

**ಗೊಂದಲ**

**ಉಪಾಧ್ಯಕ್ಷರು** : ಈಗ ಪ್ರಶ್ನೋತ್ತರ ನಂತರ ನಾನು ಹೇಳುತ್ತೇನೆ.

**ಶ್ರೀ ಎಸ್.ಎಸ್. ಪಾಟೀಲ್** : ಹೇಳ್ತೀರಲ್ಲಾ? ಸರಿಬಿಡಿ.

**ಶ್ರೀ ಬಿ.ಎನ್. ಬಚ್ಚೇಗೌಡ** : ಮಾನ್ಯ ದೇಶಪಾಂಡೆಯವರು ಹೇಳಿದರು ಏನೆಂದರೆ...

**ಗೊಂದಲ**

**ಶ್ರೀ ಆರ್.ವಿ. ದೇಶಪಾಂಡೆ** : ಮಾನ್ಯ ಬಚ್ಚೇಗೌಡರೆ, ಸರ್ಕಾರದಿಂದ ಉತ್ತರ ಕೊಡುವುದಕ್ಕೆ ನಾವು ಸಿದ್ದರಿದ್ದೇವೆ.....

**ಗೊಂದಲ**

**ಉಪಾಧ್ಯಕ್ಷರು** : ಬಚ್ಚೇಗೌಡರೇ, ಪಾಟೀಲರೇ ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಶಿವಾನಂದ ಎಸ್ ಪಾಟೀಲ್** : ನಿನ್ನೆ ಅಧ್ಯಕ್ಷರು ತಮ್ಮ ಕೊಠಡಿಗೆ ಕರೆದು ಈ ವಿಚಾರವನ್ನು ಮಂಡನೆ ಮಾಡಿದ್ದಾರೆ. ಅಧ್ಯಕ್ಷರು ಕರೆದು ಮಾತನಾಡಿದ್ದಕ್ಕೂ ಈ ಸದನದಲ್ಲಿ ಗೌರವ ಇಲ್ಲವೆ? ಬದಲಾವಣೆಯಾಗಿದ್ದರೆ ಅದನ್ನು ಹೇಳಬೇಕಾಗಿತ್ತು.

**ಉಪಾಧ್ಯಕ್ಷರು** : ನೀವು ಮಾತನಾಡುತ್ತಲೇ ಹೋದರೆ ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ.

**ಒಬ್ಬರು ಮಾನ್ಯ ಸದಸ್ಯರು** : ಅಧ್ಯಕ್ಷರ ಮಾತಿಗೆ ಈ ಸದನದಲ್ಲಿ ಗೌರವ ಇಲ್ಲ ಎಂದಂತಾಯಿತು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** : ಪ್ರಶ್ನೋತ್ತರವನ್ನು ತಾವು ಪ್ರಾರಂಭ ಮಾಡಿ. ತಮ್ಮ ಆಜ್ಞೆಯನ್ನು ನಾವು ಶಿರಸಾವಹಿಸಿ ಅದನ್ನು ಪರಿಪಾಲನೆ ಮಾಡುತ್ತೇವೆ. ಆದರೆ ಒಂದೇ ಒಂದು ಏನೆಂದರೆ ನಿನ್ನೆ ಚರ್ಚೆ ಆಗಿರತಕ್ಕಂಥಾದ್ದು ತಮ್ಮ ಗಮನಕ್ಕೂ ಇದೆ ಮತ್ತು ಸರ್ಕಾರದ ಗಮನಕ್ಕೂ

ಇದೆ. ಸರ್ಕಾರ ತನ್ನ ಗಮನದಲ್ಲಿ ಇಲ್ಲವೆಂದು ಹೇಳಬಾರದು. ಏಕೆಂದರೆ ಮಾನ್ಯ ಸಂಸದೀಯ ಸಚಿವರೂ ಕೂಡ ಇದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಬರಗಾಲದ ಬಗ್ಗೆ ಚರ್ಚೆ ಮಾಡೋಣ ಎಂದೇ ತೀರ್ಮಾನ ಆಗಿದೆ. ತಮ್ಮ ಗಮನಕ್ಕೆ ಇದು ಇಲ್ಲದೇ ಇರಬಹುದು.

**Sri R.V. Deshpande :** Sir, we are all guided by the agenda. ರಾತ್ರಿ ನಮ್ಮ ಮನೆಗೆ ಏನು ಅಜೆಂಡಾ ಬರುತ್ತದೆ ಅದರ ಪ್ರಕಾರ ನಾವು ಬರುತ್ತೇವೆ.

**ಉಪಾಧ್ಯಕ್ಷರು :** ಹೆಗಡೆಯವರೆ, ಇದು ಮತ್ತೆ ಈಗ ಬದಲಾವಣೆಯಾಗಿದೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :** ಬರಗಾಲದ ಬಗ್ಗೆ ಎಷ್ಟು ಗಂಭೀರವಾಗಿ ಚರ್ಚೆಯಾಗಿತ್ತು. ಕೌನ್ಸಿಲ್‌ನಲ್ಲಿ ನಿನ್ನೆ ಉತ್ತರವೂ ಆಗಿದೆ.

**ಗೊಂದಲ**

**ಶ್ರೀ ಆರ್.ವಿ. ದೇಶಪಾಂಡೆ :** ಅಲ್ಲಿ ಚರ್ಚೆ ಮುಗಿದು ಉತ್ತರವೂ ಆಗಿಹೋಯಿತು.

**ಉಪಾಧ್ಯಕ್ಷರು :** ಈಗ ಸಂಸದೀಯ ಸಚಿವರು ಬರಲಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :** ನಾಳೆ ಉತ್ತರ ಕೊಡುತ್ತೇವೆ ಎಂದು ಅವರೇ ನಿರ್ಣಯ ಮಾಡಿದ್ದು

**ಶ್ರೀ ಬಿ. ಸೋಮಶೇಖರ್ :** ಈಗ ಮಾನ್ಯ ದೇಶಪಾಂಡೆಯವರು ಮೇಲ್ಮನೆಯಲ್ಲಿ ಚರ್ಚೆ ನಡೆದು ಸರ್ಕಾರದಿಂದ ಉತ್ತರ ಆಗಿಹೋಗಿದೆ ಎಂದು ಹೇಳಿದರು. ಹಾಗಾದರೆ ಈ ಸದನವನ್ನು ಮುಚ್ಚಿಬಿಡಿ. ಮೇಲ್ಮನೆಯಲ್ಲಿ ಉತ್ತರ ಆಗಿದೆಯಲ್ಲಾ?

**ಶ್ರೀ ಆರ್.ವಿ. ದೇಶಪಾಂಡೆ :** ನಾನು ನಿಮಗೆ ಹೇಳಿದ್ದು ಏನೆಂದರೆ ಸರ್ಕಾರ ಉತ್ತರ ಕೊಡುವುದಕ್ಕೆ ಸಿದ್ಧವಿದೆ, ಸಮರ್ಥ ಇದೆ. ಮೇಲ್ಮನೆಯಲ್ಲಿ ಚರ್ಚೆಯಾಗಿದೆ ಮತ್ತು ಅದಕ್ಕೆ ಸರ್ಕಾರದಿಂದ ಉತ್ತರವೂ ಆಗಿದೆಯೆಂದು ಹೇಳಿದೆ.

**ಶ್ರೀ ಬಿ. ಸೋಮಶೇಖರ್ :** ಹಾಗಾದರೆ ಇಲ್ಲಿ ಚರ್ಚೆಯಾಗುವುದು ಬೇಡವೇನು?

**ಶ್ರೀ ಆರ್.ವಿ. ದೇಶಪಾಂಡೆ :** ಬೇಡ ಎಂದು ಯಾರು ಹೇಳುತ್ತಾರೆ? ಇದನ್ನು ನಾನು ನಿಮ್ಮ ಗಮನಕ್ಕೆ ತಂದಿದ್ದೇನೆ.

**ಉಪಾಧ್ಯಕ್ಷರು :** ಈಗ ಪ್ರಶ್ನೋತ್ತರ ಶುರುಮಾಡೋಣ. ಮಾನ್ಯ ರೇವು ನಾಯಕರು...

**ಶ್ರೀ ಬಿ. ಸೋಮಶೇಖರ್ :** ಮಾನ್ಯ ದೇಶಪಾಂಡೆಯವರು ನೀವು ಇಲ್ಲಿ ಇದ್ದವರು, ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದವರು..

**ಉಪಾಧ್ಯಕ್ಷರು :** ಸೋಮಶೇಖರ್‌ರವರೆ, ದಯಮಾಡಿ ಕುಳಿತುಕೊಳ್ಳಿ. ಈಗ ಪ್ರಶ್ನೋತ್ತರ.

## 2. ಪ್ರಶ್ನೋತ್ತರ

### ಅ. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

### ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ನೇರಸಾಲ

387 (3449) : ಶ್ರೀ ರೇವು ನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?